

# ಆತ್ಮ ಕಂಡ ಹುಡುಗಿ

ಕಪ್ಪು ಸುತ್ತಿದ ಅವಳ ಕಣ್ಣುಗಳು
ಅನುಮಾನದಿಂದ ಕನ್ನಡಿಯ
ಇಣುಕಿದರೆ,
ಬಾಣಲೆಯಲ್ಲಿ ಬೇಯಲು ಸಿದ್ಧವಾದ
ಮೀನು

ಬಣ್ಣಬಣ್ಣದ
ಗಾಜಿನ ಬಳೆ, ಹೂವಿನ ರಾಶಿ, ಹಣ್ಣಿನ ಅಂಗಡಿ
ದೂರದಲ್ಲೆಲ್ಲೋ ಋತು ವಸಂತನ
ಕರೆಯುವ ಹಕ್ಕಿಯ ದನಿ
ದಿಢೀರನೆ ಸ್ತಬ್ಧವಾದರೆ
ಧ್ರುವಮಂಡಲದ ಗಣಂಗಳೆಲ್ಲ ದಿಕ್ಕಾಪಾಲು

ಮಾಸಿದ ಉಗುರಿಗೆ
ಬಣ್ಣ ತುಂಬುತ್ತಿದ್ದಾಳೆ ಹುಡುಗಿ
ಬಾಣಂತಿಯ ಹೊರಿಸಿಗೆ ಕಟ್ಟಿದ ಜೋಳಿಗೆ
ಖಾಲಿ ಇದ್ದರೆ
ಅವಳ ಎದೆಹಾಲಿನೊಂದಿಗೆ
ಕುಪ್ಪಡಿಗೆಯ ಕಿಡಿ ಆರುತ್ತದೆ

ಕಂಡ ಕಂಡಂತೆ ಮಾತನಾಡಿದವರು
ಕರುಳ ಗಂಟೆಗೆ ನಾದವಾದವಳನ್ನು
ಪಣತಿಯಿಲ್ಲದೇ ಜ್ಯೋತಿಯಾದವಳನ್ನು
ಕತ್ತು ಹಿಸಿಕಿದವರು ಯಾರು...
ಅನುಭವವೇ ಅಂತರಂಗದ ಬಾಗಿಲು
ಎಂದವಳನ್ನು

ಅಂಡ ಪಿಂಡ ಬ್ರಹ್ಮಾಂಡ
ಗರ್ಭಚೀಲ
ಕಡುನೀಲಿಯಾಗಿದೆ
ಅಂಗಸಂಗದ ಹಂಗುಹರಿದವಳು
ಆತ್ಮಕಂಡ ಹುಡುಗಿ
ಒಲೆಯ ಕಿಚ್ಚು ಆರಬಹುದು
ಒಳಗಣ ಕಿಚ್ಚ ನಂದಿಸಬಹುದೇ?

● **ಭಾಗ್ಯಜ್ಯೋತಿ ಹಿರೇಮಠ**

ಕಲೆ: ವಾಗೀಶ ಹೆಗಡೆ